**ದಿನಾಂಕ 16.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ **ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

5. ನಂತರ ಸದರಿ ಸ್ಥಳದಲ್ಲಿ ಮರೆಯಲ್ಲಿದ್ದ ನಾವು ಸದರಿ ಆಸಾಮಿಯನ್ನು ಸುತ್ತುವರೆದು ಹಿಡಿದು, ಹೆಸರು ವಿಳಾಸ ಕೇಳಲಾಗಿ ಭಾಸ್ಕರ್ ಬಿನ್ ವೆಂಕಟರವಣಪ್ಪ, 40 ವರ್ಷ, ಪೆದ್ದೂರು ಗ್ರಾಮ, ಹಾಲಿ ವಾಸ ಲೆಗ್ಗೆರೆ , ಬೆಂಗಳೂರು ಎಂದು ತಿಳಿಸಿರುತ್ತಾನೆ. ಸದರಿ ಆಸಾಮಿಯನ್ನು ಬಿಳಿಯ ಹ್ಯಾಂಡ್ ಬ್ಯಾಗ್ ನಲ್ಲಿ ಇರುವ ವಸ್ತು ಏನು ಎಂದು ವಿಚಾರಿಸಲಾಗಿ ಆತ ತೊದಲುತ್ತಾ ಗಾಂಜಾ ಎಂದು ತಿಳಿಸಿದ್ದು, ಅದನ್ನು ಗಿರಾಕಿಗಳಿಗೆ ಮಾರಾಟ ಮಾಡಿ ಹಣ ಸಂಪಾದನೇ ಮಾಡುವ ಉದ್ದೇಶದಿಂದ ತಂದಿರುವುದಾಗಿ ಮತ್ತು ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾನೆ. ಆಗ ನಾನು ನನ್ನ ಪರಿಚಯವನ್ನು ಮಾಡಿಕೊಂಡು ಅಕ್ರಮವಾಗಿ ಗಾಂಜಾ ಮಾರಾಟ ಮಾಡುವ ಬಗ್ಗೆ ಆತನ ಅಂಗ ಶೋಧನೆ ಮಾಡುವ ಉದ್ದೇಶದಿಂದ ಆತನನ್ನು ಕುರಿತು ನಿನ್ನ ಅಂಗ ಶೋಧನೆ ಮಾಡುವ ಸಲುವಾಗಿ ನ್ಯಾಯಾಧೀಶರ ಮುಂದೆ ಹಾಜರಪಡಿಸಬೇಕೆ, ಅಥವಾ ಗೆಜೆಟೆಡ್ ಅಧಿಕಾರಿಯಾದ ಮುಂದೆ ಹಾಜರಪಡಿಸಬೇಕೆ ? ಎಂದು ಕೇಳಲಾಗಿ ಆತನು ಗೆಜೆಟೆಡ್ ಅಧಿಕಾರಿಯವರು ಅಂಗ ಶೋಧನೆ ಮಾಡಬಹುದು ಎಂದು ತಿಳಿಸಿರುತ್ತಾನೆ. ಈ ಬಗ್ಗೆ ಲಿಖಿತ ಪ್ರಶ್ನಾವಳಿಗಳನ್ನು ತಯಾರಿಸಿ ಆರೋಪಿಯ ಒಪ್ಪಿಗೆಯನ್ನು ಪಡೆಯಲಾಗಿದೆ. ಸಾಕ್ಷಿಯು ಸದರಿ ಪ್ರಶ್ನಾವಳಿಯನ್ನು ನೋಡಿ ಗುರುತಿಸಿದ ಮೇರೆಗೆ

ಅದನ್ನು **ನಿಪಿ–7** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–7 (ಎ)** ಎಂದು, ಆರೋಪಿಯ ಸಹಿಯನ್ನು **ನಿಪಿ–7(ಬಿ)** ಎಂದು ಗುರುತಿಸಲಾಯಿತು.

6. ನಂತರ ಸ್ಥಳಕ್ಕೆ ಗೆಜೆಟೆಡ್ ಅಧಿಕಾರಿಯಾದ ಪ್ರಾಸಾ–2 ರವರನ್ನು ಬರ ಮಾಡಿಕೊಂಡು ಅವರಿಗೆ ನಿಪಿ–3 ರಂತೆ Cr.PC ಕಲಂ 100(4) ರೀತ್ಯಾ ನೋಟೀಸ್ ಜಾರಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು **ನಿಪಿ–3(ಬಿ)** ಎಂದು ಗುರುತಿಸಲಾಯಿತು. ನಂತರ ನನ್ನ ಕೋರಿಕೆಯ ಮೇರೆಗೆ ಪ್ರಾಸಾ–2 ರವರು ಆರೋಪಿಯನ್ನು ಕುರಿತು ನಿನ್ನ ಅಂಗ ಶೋಧನೆ ಮಾಡುವ ಸಲುವಾಗಿ ನ್ಯಾಯಾಧೀಶರ ಮುಂದೆ ಹಾಜರಪಡಿಸಬೇಕೆ, ಅಥವಾ ಗೆಜೆಟೆಡ್ ಅಧಿಕಾರಿಯಾದ ನಾನೇ ಅಂಗ ಶೋಧನೆ ಮಾಡಬಹುದೇ ? ಎಂದು ಕೇಳಲಾಗಿ ಆತನು ಗೆಜೆಟೆಡ್ ಅಧಿಕಾರಿಯಾದ ನೀವೆ ಅಂಗ ಶೋಧನೆ ಮಾಡಬಹುದು ಎಂದು ತಿಳಿಸಿರುತ್ತಾನೆ. ಈ ಬಗ್ಗೆ ಲಿಖಿತ ಪ್ರಶ್ನಾವಳಿಗಳನ್ನು ತಯಾರಿಸಿ ಆರೋಪಿಯ ಒಪ್ಪಿಗೆ ಸಹಿಯನ್ನು ಪಡೆಯಲಾಗಿದೆ. ಸಾಕ್ಷಿಯು ಸದರಿ ಪ್ರಶ್ನಾವಳಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದೆ.

7. ನಂತರ ಗೆಜೆಟೆಡ್ ಅದಕಾರಿಯವರು ನಮ್ಮ ಸಿಬ್ಬಂದಿ ಮೂಲಕ ಆರೋಪಿಯ ಅಂಗ ಶೋಧನೆ ಮಾಡಲಾಗಿ ಆತನ ಬಳಿ ಒಂದು ಸಾಮ್ ಸ್ಯಾಂಗ್ ಕಂಪನಿಯ ಮೊಬೈಲ್ ಇದ್ದು ಅದನ್ನು ಮುಂದಿನ ಕ್ರಮಕ್ಕಾಗಿ ಜಪ್ತು ಪಡಿಸಿಕೊಳ್ಳಲಾಯಿತು. ನಂತರ ಆರೋಪಿಯ ಬಳಿ ಇದ್ದ ಬಿಳಿ ಬ್ಯಾಗ್ ಅನ್ನು ಪರಿಶೀಲಿಸಲಾಗಿ ಅದರಲ್ಲಿ ಅರ್ಧ ಒಣಗಿದ

ಕಡ್ಡಿ, ಬೀಜ ಒಳಗೊಂಡ ಗಾಂಜಾ ಇತ್ತು ಅದನ್ನು ಬ್ಯಾಗ್ ಸಮೇತ ತೂಕ ಮಾಡಿ ನೋಡಲಾಗಿ 2 ಕೆಜಿ 15 ಗ್ರಾಂ ಇದ್ದು, ಬ್ಯಾಗ್ ತೂಕ ಮಾಡಲಾಗಿ ಸುಮಾರು 15 ಗ್ರಾಂ ಇತ್ತು. ನಂತರ ಸದರಿ ಗಾಂಜಾದ ಒಟ್ಟು ಮೌಲ್ಯ ಸುಮಾರು 60 ಸಾವಿರ ರೂಗಳು ಇರಬಹುದು ಎಂದು ಅಂದಾಜಿಸಲಾಯಿತು. ನಂತರ ಗಾಂಜಾವನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಹೊಲೆದು, SR ಎಂಬ ಅಕ್ಷರದಿಂದ ಸೀಲ್ ಮಾಡಿ, FLMS  ಎಂಬ ಬಾರ್ ಕೋಡ್ ಇರುವ ಚೀಟಿಯನ್ನು ಅಂಟಿಸಿ,  ಮುಂದಿನ ಕ್ರಮಕ್ಕಾಗಿ ಜಪ್ತು ಪಡಿಸಿಕೊಳ್ಳಲಾಯಿತು.  ಮೊಬೈಲ್ ಅನ್ನು ಪರಿಶೀಲಿಸಲಾಗಿ ಕಡು ನೀಲಿ ಬಣ್ಣದ Galaxy A10 screen touch  Samsung mobile  ಆಗಿದ್ದು, ಅದನ್ನು ಮುಂದಿನ ಕ್ರಮಕ್ಕಾಗಿ ಜಪ್ತು ಪಡಿಸಿಕೊಳ್ಳಲಾಯಿತು.

8. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ಮಃ2.30 ರಿಂದ 3.30 ರ ತನಕ ತಯಾರು ಮಾಡಿದ್ದು, ಅದಕ್ಕೆ ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ. ಸಾಕ್ಷಿಯು ಸದರಿ  ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–5 ಎಂದು ಗುರುತಿಸಿದ್ದು,  ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ–5(ಸಿ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಫೋಟೋಗಳನ್ನು ತೆಗೆದಿದ್ದು ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 4 ಭಾವ ಚಿತ್ರಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಈಗಾಗಲೇ ಒಟ್ಟಾರೆಯಾಗಿ ನಿಪಿ–6 ಎಂದು ಗುರುತಿಸಲಾಗಿದೆ. ಸಾಕ್ಷಿಯ ನ್ಯಾಯಾಲಯದ ಮುಂದೆ

ಹಾಜರುಪಡಿಸಿರುವ ಮೊಬೈಲ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಮ್‌ಓ-1 ಎಂದು ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

9.ನಂತರ ಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಹಿಂದುರಿಗಿ ದೂರನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಚಾಸಾ-11 ರವರ ಮುಂದೆ ಹಾಜರು ಪಡಿಸಿದ್ದು, ಅವರು ಅದನ್ನು ಸ್ವೀಕರಿಸಿ ಠಾಣಾ ಮೊಕದ್ದಮ್ಮೆ ಸಂಖ್ಯೆ 71/2020 ರಲ್ಲಿ ಪ್ರಕರಣವನ್ನು ನೋಂದಾಯಿಸಿ ಪ್ರ.ವ. ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯ ಹಾಗೂ ಮೇಲಾಧಿಕಾರಿಗಳಿಗೆ ರವಾನಿಸಿರುತ್ತಾರೆ. ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ-8** ಎಂದು ಸಾಕ್ಷಿಯ ಸಹಿಯನ್ನು **ನಿಪಿ-8(ಎ)** ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಎಸ್ ಎಮ್ ರವರಿಂದ**

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.